**ಅಪರ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ**

**CC No 1365/2022**

| | | |
|---|---|---|
| ಸಾಕ್ಷಿದಾರರ ಹೆಸರು | : | ಶರತ್ |
| ತಂದೆಯ ಹೆಸರು | : | ರಾಮಕೃಷ್ಣ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಸಿಪಿಸಿ-334 ರಾಮನಗರ ಸಿ ಇ ಎನ್ ಪೊಲೀಸ್ ಠಾಣೆ |
| ವಾಸಸ್ಥಳ | : | ಎ ವಿ ಹಳ್ಳಿ, ಚನ್ನಪಟ್ಟಣ. |

ಸಾಕ್ಷಿಯನ್ನುಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದ: ದಿಃ. 04.03.2026

ನಾನು ಫೆಬ್ರವರಿ-2021 ರಿಂದ ಜೂನ್-2025 ರವರೆವಿಗೂ ನಾನು ಚನ್ನಪಟ್ಟಣ ಟೌನ್ ಪಿ.ಎಸ್ ನಲ್ಲಿ ಸಿಪಿಸಿ-809 ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 16.02.2022 ರಂದು ರಾತ್ರಿ 8-00 ಗಂಟೆ ಸುಮಾರಿಗೆ ನನ್ನನ್ನು ಮತ್ತು ಚಾಸಾ 1 ರವರನ್ನು ಚನ್ನಪಟ್ಟಣ ಟೌನ್ ಬೀಟ್ ನಂ.1 ರಿಂದ 4 ಗಸ್ತು ಕರ್ತವ್ಯಕ್ಕೆ ಠಾಣಾಧಿಕಾರಿ ನೇಮಿಸಿರುತ್ತಾರೆ. ಚನ್ನಪಟ್ಟಣದ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣ, ಸಾತನೂರು ರಸ್ತೆ, ಇಂದಿರಾ ಕಾಟೇಜ್, ಚರ್ಚ್ ರಸ್ತೆ, ಆರ್ ಕೆ ಬಡಾವಣೆ, ಮಾರುತಿ ಬಡಾವಣೆ, ಅನ್ನಪೂರ್ಣೇಶ್ವರಿ ನಗರ ಅಲ್ಲಿಂದ ಮುಗಿಸಿ ಇದ್ಗಾ ಮೈದಾನದ ಕಡೆ ಮುಗಿಸಿ 8ನೇ ಕ್ರಾಸ್ ನಲ್ಲಿರುವ ಕರ್ನಾಟಕ ಬ್ಯಾಂಕ್ ನ ಎಟಿಎಂ ಕಡೆ ಬರುತ್ತಿದ್ದಾಗ ದಿನಾಂಕ 17.02.2022 ಬೆಳಗ್ಗಿನ ಜಾವ 4-00 ಗಂಟೆ ಸುಮಾರಿಗೆ ಗಸ್ತು

ಬರುತ್ತಿದ್ದಾಗ ಸಮವಸ್ತ್ರದಲ್ಲಿದ್ದ ನನ್ನನ್ನು ಮತ್ತು ಚಾಸಾ-2ರವರನ್ನು ಸದರಿ ಎಟಿಎಂ ಹತ್ತಿರ ನಿಂತಿದ್ದ ಇಬ್ಬರು ಹಸಾಮಿಗಳು ಓಡಿ ಹೋಗುತ್ತಿದ್ದರು. ಆಗ ನಾನು ಮತ್ತು ಚಾಸಾ-2ರವರು ಸದರಿಯವರನ್ನು ಬೆನ್ನಟ್ಟಿ ಹಿಡಿದು ಸದರಿಯವರುಗಳ ಹೆಸರು ಮತ್ತು ವಿಳಾಸವನ್ನು ಚಾಸಾ-1ರವರು ಕೇಳಲಾಗಿ ಕುಮಾರಸ್ವಾಮಿ ಬಿನ್ ಲೇಟ್ ಶ್ರೀಧರ್, 30 ವರ್ಷ, ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ವಾಸಿ ಎಂದು ನುಡಿದಿರುತ್ತಾನೆ. ಇನ್ನೊಬ್ಬನನ್ನು ನಾನು ಹಿಡಿದುಕೊಂಡಿದ್ದು ಆತನ ಹೆಸರು ರಘು ಕೋಣನಹಳ್ಳಿ ಮಂಡ್ಯ ತಾಲ್ಲೂಕು ಎಂದು ನುಡಿದಿರುತ್ತಾನೆ.

ನಾನು ಹಿಡಿದುಕೊಂಡ ಆರೋಪಿ 2 ರಘು ಬಳಿ ಸ್ಪ್ರೇ ಬಟಲ್ ಇದ್ದು ಮತ್ತು ವೈಯರ್ ಕಟ್ಟರ್ ಹಾಗೂ ಒಂದು ಜೊತೆ ಹ್ಯಾಂಡ್ ಗ್ಲೋಸ್ ಇದ್ದುದ್ದು ಕಂಡುಬಂದಿರುತ್ತದೆ. ಸದರಿಯವರನ್ನು ವಿಚಾರಿಸಿದಾಗ ನಾವು ಎಟಿಎಂ ನಲ್ಲಿ ಕಳ್ಳತನ ಮಾಡಲು ಬಂದಿದ್ದೇವೆ ಎಂದು ಹೇಳಿರುತ್ತಾರೆ. ನಂತರ ಪೊಲೀಸ್ ಠಾಣೆಗೆ ವಿಚಾರ ತಿಳಿಸಿ ಆರೋಪಿತರನ್ನು ನಮ್ಮ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಠಾಣಾ ಎಸ್.ಹೆಚ್.ಒ. ಮುಂದೆ ಹಾಜರುಪಡಿಸಿರುತ್ತೇವೆ. ನಂತರ ಆರೋಪಿಗಳ ವಿರುದ್ದ ಚಾಸಾ-1 ದೂರು ದಾಖಲು ಮಾಡಿರುತ್ತಾರೆ. ಆರೋಪಿ 1 ಮತ್ತು 2ನ್ನು ನೋಡಿ ಗುರುತಿಸಿರುತ್ತಾರೆ. ಖಾಲಿ ಸ್ಪ್ರೇ ಬಟಲ್ ನ್ನು ಮು.ಮಾ-1 ಎಂದು, ವೈಯರ್ ಕಟ್ಟರ್ ನ್ನು ಮು.ಮಾ-2 ಎಂದು, ಒಂದು ಜೊತೆ ಹ್ಯಾಂಡ್ ಗ್ಲೋಸ್ ನ್ನು ಒಟ್ಟಿಗೆ ಸೇರಿಸಿ ಮು.ಮಾ.-3 ಎಂದು ಈಗಾಗಲೇ ಗುರುತಿಸಲಾಗಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದಾರೆ. ಮಹಜರ್ ಕಾಲಕ್ಕೆ ತೆಗೆದ ಫೋಟೋಗಳನ್ನು ನನಗೆ ಸೇರಿದ ಮೊಬೈಲ್ ಫೋನ್ ನಿಂದ ಸೆರೆ ಹಿಡಿದು

ಪ್ರಿಂಟ್ ತೆಗೆದು ಕೇಸಿನ ಕಡತಕ್ಕೆ ಅಳವಡಿಸಲಾಗಿದೆ. ಘಟನಾ ಸಂಬಂಧ ತನಿಖಾಧಿಕಾರಿ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಸಿ ಎಂ ಕೆ ವಕೀಲರಿಂದಃ</u>**

ನಮ್ಮ ಪೊಲೀಸ್ ಠಾಣಾ ರಾತ್ರಿ ಬೀಟ್ ಕರ್ತವ್ಯಕ್ಕೆ 4 ಬೀಟ್ ಗಳಾಗಿ ಮಾಡಿಕೊಂಡಿರುತ್ತೇವೆ. ಗಸ್ತು ಕರ್ತವ್ಯಕ್ಕೆ ತಮ್ಮ ಖಾಸಗಿ ವಾಹನ ಅಥವಾ ಇಲಾಖಾ ವಾಹನ ಬಳಸಿದ್ದೀರಾ ಎಂದರೆ ಸಾಕ್ಷಿ ಖಾಸಗಿ ವಾಹನ ಎನ್ನುತ್ತಾರೆ. ತಮ್ಮ ಹೇಳಿಕೆಯಲ್ಲಿ ಇಂತ ವಾಹನ ಬಳಸಿದ್ದೇವೆ ಎಂದು ಹೇಳಿಲ್ಲ ಎನ್ನುತ್ತಾರೆ. ಘಟನೆ ನಡೆಯಿತು ಎಂದು ಹೇಳುವ ದಿನ ನಾನಾಗಲಿ ಅಥವಾ ಚಾಸಾ-1ರವರಾಗಲಿ ನಮ್ಮ ಖಾಸಗಿ ವಾಹನಲ್ಲಿ ಬೀಟ್ ಕರ್ತವ್ಯಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಮುಮಾ-1 ಖಾಲಿ ಬಾಟಲ್ ಇದ್ದು ಅದರಲ್ಲಿ ಯಾವುದೇ ದ್ರವ ಇಲ್ಲ ಎಂದರೆ ನಾವು ಅಮಾನತ್ತುಪಡಿಸಿಕೊಂಡಾಗ ದ್ರವ ಇತ್ತು ಎನ್ನುತ್ತಾರೆ. ಮುಮಾ-2 ವೈಯರ್ ಕಟ್ಟು ಮಾಡುವ ಸಾಧನ ಅಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ. ಸದರಿ ಮುಮಾ-2ರಲ್ಲಿ ಕಟಿಂಗ್ ಎಡ್ಜ್ ಇಲ್ಲ ಎಂದರೆ ಸರಿ. ಮುಮಾ.1 ರಿಂದ 3 ವಸ್ತುಗಳನ್ನು ಕೇಸಿಗೋಸ್ಕರ ಸೃಷ್ಟಿ ಮಾಡಿ ಕೇಸಿಗೆ ಹಾಜರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮುಮಾ-1 ರಿಂದ 3 ಆರೋಪಿತರಿಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ಎಟಿಎಂ ನ ಒಳಗೆ ಮತ್ತು ಹೊರಗೆ ಸಿಸಿಟಿವಿ ಕ್ಯಾಮೇರಾ ಇರುತ್ತದೆ ಎಂದರೆ ಸರಿ. ಆರೋಪಿತರು ಎಟಿಎಂ ಒಳಗೆ ಇದ್ದರಾ ಎಂದರೆ ಸಾಕ್ಷಿ ಎಂಟಿಎಂ ನ ಎದುರುಗಡೆ ಇರುವ ರಸ್ತೆಯಲ್ಲಿ ಇದ್ದರು ಎನ್ನುತ್ತಾರೆ. ಆರೋಪಿತರಿಬ್ಬರು

ಮಂಡ್ಯದಿಂದ ಬೆಂಗಳೂರಿಗೆ ಮೋಟಾರ್ ಸೈಕಲ್ ನಲ್ಲಿ ತಮ್ಮ ಠಾಣಾ ಮುಂದೆ ಅಡ್ಡಗಟ್ಟಿ ವಿನಾಕಾರಣ ಸುಳ್ಳು ದೂರು ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಮಹಜರ್ ಕಾಲಕ್ಕೆ ನನ್ನ ಮೊಬೈಲ್ ನಲ್ಲಿ ತೆಗೆದ ಫೋಟೋಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫೋಟೋ ತೆಗೆದ ಸಮಯ ನನಗೆ ನೆನಪಿಲ್ಲ. ನನ್ನ ಮೊಬೈಲ್ ನಲ್ಲಿ ಫೋಟೋ ತೆಗೆಯದ ಕಾರಣ ಸಮಯ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಮುಮಾ-1 ರಿಂದ 3 ಆರೋಪಿತರಿಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿ ಅಂಶಕ್ಕೋಸ್ಕರ ಮೇಲಾಧಿಕಾರಿಗಳ ಮಾತ್ತು ಕೇಳಿ ಆರೋಪಿತರ ವಿರುದ್ದ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.